ಸಿದ್ಧರಾಗಿರುವರೋ, ಯಾರಿಗೆ ತ್ಯಾಗವೇ ಆಯುಧವಾಗಿದೆಯೊ, ಧರ್ಮವೇ ಖಡ್ಗವಾಗಿದೆಯೊ, ಅಂಥವರು ದೇಶಕ್ಕೆ ಬೇಕಾಗಿದ್ದಾರೆ. ಜೀವನ ಸಂಗ್ರಾಮದಲ್ಲಿ ಹೋರಾಡಬಲ್ಲ ವೀರಸ್ವಭಾವದ ಮನುಷ್ಯರು ನಮಗೀಗ ಬೇಕಾಗಿದ್ದಾರೆ, ಜೀವನವನ್ನು ನಂದನವನದಂತೆ ನೋಡುವ ಪ್ರೇಮಿ ಬೇಕಾಗಿಲ್ಲ" ಎಂದು ನಿಷ್ಠುರವಾಗಿ ನುಡಿದು ದೇಶದ ಪುನರುಜ್ಜೀವನಕ್ಕೆ ಅಗತ್ಯವಾದ ವ್ಯಕ್ತಿಗಳನ್ನು ನಿರ್ಮಿಸುವ ಮೂಲಕ ಸ್ವಾಮಿ ವಿವೇಕಾನಂದರು ಮುಂದಿನ ಸ್ವಾತಂತ್ರ್ಯ ಹೋರಾಟಕ್ಕೆ ಭದ್ರವಾದ ಬುನಾದಿಯನ್ನು ನಿರ್ಮಿಸಿದರು.

ಸ್ವಾಮಿ ವಿವೇಕಾನಂದರರದು 'ತ್ಯಾಗವೇ ಆಯುಧ, ಧರ್ಮವೇ ಖಡ್ಗ' ಎಂಬ ಧ್ಯೇಯ. ೧೯೦೨ರಲ್ಲಿಯೇ ಅವರ ದೇಹ ತ್ಯಾಗವಾಯಿತು, ಆದರೂ ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಲು ಸಿದ್ಧರಾದ ನೇತಾಜಿ ಸುಭಾಷ್‌ಚಂದ್ರ ಬೋಸ್, ಭಗತ್‌ಸಿಂಗ್, ಚಂದ್ರಶೇಖರ್ ಆಜಾದ್ ಮೊದಲಾದ ಕ್ರಾಂತಿಕಾರಿಗಳಿಂದ ಹಿಡಿದು, ಸತ್ಯ–ಅಹಿಂಸೆಯ ಅಸ್ತ್ರದ ಮೂಲಕ ಉಪವಾಸ ಸತ್ಯಾಗ್ರಹಗಳ ಕ್ರಾಂತಿಗೆ ಜಗತ್ತಿಗೊಂದು ಮಹಾನ್ ಉದಾಹರಣೆಯಾದ ಮಹಾತ್ಮ ಗಾಂಧೀಜಿಯವರೆಗೆ ಪ್ರತಿಯೊಬ್ಬರೂ ಸ್ವಾಮಿ ವಿವೇಕಾನಂದರ ಪ್ರೇರಣೆ ಪ್ರಭಾವಕ್ಕೆ ಒಳಗಾಗಿರುವುದನ್ನು ಕಂಡಾಗ, ಸ್ವಾಮಿ ವಿವೇಕಾನಂದರ ಧ್ಯೇಯ ಅವರೆಲ್ಲರಲ್ಲೂ ಒಡಮೂಡಿದೆ ಎನಿಸದೇ ಇರಲಾರದು. ೧೯೦೫ ರಲ್ಲಿ ಬಂಗಾಳದ ವಿಭಜನೆಯ ವಿರುದ್ಧ ಬಂಗಾಳದ ಬೀದಿ ಬೀದಿಯಲ್ಲಿ 'ವಂದೇಮಾತರಂ' ಗೀತೆ ಮೊಳಗುತ್ತದೆ. ೧೯೧೧ ರಲ್ಲಿ ಬಂಗಾಳ ಒಂದಾಗುತ್ತದೆ. ೧೯೧೯ ರಲ್ಲಿ ಅಮೃತಸರದಲ್ಲಿ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ನಡೆಯುತ್ತದೆ. ಈ ದುರಾಚಾರದ ವಿರುದ್ಧ ಭಾರತೀಯರು ಸಿಡಿದೇಳುತ್ತಾರೆ. ೧೯೨೧ ರಿಂದ ೧೯೩೧ ರ ನಡುವೆ ಭಗತ್‌ಸಿಂಗ್, ಚಂದ್ರಶೇಖರ ಆಜಾದ್‌ರ ನೇತೃತ್ವದಲ್ಲಿ ಕ್ರಾಂತಿಕಾರಿಗಳ ರೋಮಾಂಚಕಾರಿ ಹೋರಾಟಗಳು ನಡೆಯುತ್ತವೆ. ೧೯೨೦ ರಲ್ಲಿ ಗಾಂಧೀಜಿಯವರ ಪ್ರವೇಶವಾಗುತ್ತದೆ. ೧೯೩೦ ರ ಉಪ್ಪಿನ ಸತ್ಯಾಗ್ರಹ ಹೋರಾಟ, ೧೯೪೨ ರ ಚಲೇಜಾವ್ ಚಳವಳಿ, 'ಮಾಡು ಇಲ್ಲ ಮಡಿ'ಯಲು ಮುಂದಾದ ಲಕ್ಷ ಲಕ್ಷ ಪುರುಷಸಿಂಹರ ಆ ದೃಶ್ಯ – ಇವೆಲ್ಲ ಸ್ವಾಮಿ ವಿವೇಕಾನಂದರು ೧೯೦೨ ಕ್ಕಿಂತ ಮುಂಚೆಯೇ ಚಿತ್ರಿಸಿದ ಚಿತ್ರಣವಾಗಿತ್ತು ಎಂದೆನಿಸದೇ ಇರದು.

ಆ ಸಂದರ್ಭದಲ್ಲಿ ನಗುನಗುತ್ತಾ, 'ಭಾರತಮಾತಾ ಕೀ ಜೈ' ಎಂದು ನೇಣಿನ ಹಗ್ಗವನ್ನು ಹೂಮಾಲೆಯಂತೆ ಧರಿಸಿದವರೆಷ್ಟೋ, ಹೊಟ್ಟೆಯಲ್ಲಿನ ಗರ್ಭವನ್ನು, ಮೊಲೆಕುಡಿವ ಮಕ್ಕಳನ್ನು ಕಣ್ಣೆದುರೇ ಕಳೆದುಕೊಂಡು ಸ್ವಾತಂತ್ರ್ಯದ ಯಜ್ಞಕುಂಡಕ್ಕೆ ಹಾರಿದವರೆಷ್ಟೋ, ಶಾಲೆ, ಕಾಲೇಜು, ಮನೆ, ಮಠ, ಮಡದಿ, ಮಕ್ಕಳು, ಬಂಧುಮಿತ್ರರು – ತಮ್ಮ ಸರ್ವಭವಿಷ್ಯವನ್ನೂ ಜಗನ್ಮಾತೆ ಭಾರತೀಯ ಪದತಲಕ್ಕೆ ಅರ್ಪಿಸಿ ಬಲಿದಾನಗೈದವರದೆಷ್ಟೋ, ಲೆಕ್ಕ ಇಡಲು ಯಾರಿಗೆ ತಾನೆ ಸಾಧ್ಯ? ಇಂಥ ಲಕ್ಷ ಲಕ್ಷ ಜನ ಭಾರತೀಯರು, "ಮರೆಯದಿರಿ, ಜಗನ್ಮಾತೆಯ ಅಡಿದಾವರೆಯಲ್ಲಿ ಬಲಿದಾನಕ್ಕಾಗಿ ನೀವು ಜನ್ಮ ವೆತ್ತಿರುವಿರಿ" ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಸತ್ಯ ವಾಗಿಸಿದರು. ಇಡೀ ಸ್ವಾತಂತ್ರ್ಯ ಹೋರಾಟದ ಮಹಾಚಿತ್ರವನ್ನು ೧೯೦೨ಕ್ಕೆ ಮೊದಲೇ ಸ್ವಾಮಿ ವಿವೇಕಾನಂದರು ರೂಪಿಸಿಟ್ಟಿದ್ದರು ಎನ್ನುವಷ್ಟು ಗಾಢ ಸಂಬಂಧ ಎದ್ದು ಕಾಣುತ್ತದೆ.

"ನಮ್ಮ ಈ ವ್ಯಾಧಿಗೆ ಯಾರ ಹತ್ತಿರ ಔಷಧವಿದೆ? ಕೇವಲ ಏಳೆಂಟು ನೂರು ಮುಸಲ್ಮಾನರು ಬಂದರು. ಲಕ್ಷಲಕ್ಷವಾಗಿ, ಕೋಟಿಕೋಟಿಯಾಗಿ ಬೆಳೆದರು. ಒಂಬತ್ತು ನೂರು ವರುಷಗಳ ಕಾಲ ಭಾರತವನ್ನಾಳಿದರು. ಆದರೂ ಭಾರತೀಯರ ನಿದ್ರಾಭಂಗವಾಗಲಿಲ್ಲ. ಅದರಂತೆ ಸಣ್ಣದೊಂದು ವ್ಯಾಪಾರಿ ತಂಡವಾಗಿ ಬಂದ ಆಂಗ್ಲರು ಸಾಮ್ರಾಜ್ಯ ಸ್ಥಾಪನೆಗೈದರು, ಇಂದಿನವರೆಗೂ ಆಳುತ್ತಿದ್ದಾರೆ. ಈಗಲೂ ಭಾರತೀಯರಿಗೆ ತಮ್ಮ ಕರ್ತವ್ಯದ ಅರಿವಾಗಲಿಲ್ಲ, ಅವರು ಕಾಲುಚಾಚಿ ಗೊರಕೆ ಹೊಡೆಯುತ್ತ ಮಲಗಿದ್ದಾರೆ. ಇವರನ್ನು ಹೇಗೆ ಎಚ್ಚರಿಸಲಿ?" ಎಂದು ದಯಾನಂದ ಸರಸ್ವತಿಯವರು ಒಂದು ರಾತ್ರಿ ಕಂಗಾಲಾಗಿ ಚಿಂತಿಸುತ್ತಿದ್ದ ಬಗ್ಗೆ ಉಲ್ಲೇಖವಿದೆ. ದಯಾನಂದ ಸರಸ್ವತಿ ಅವರ ಚಿಂತೆಗೆ ಉತ್ತರವಾಗಿ ದುಡಿದ ಸ್ವಾಮಿ ವಿವೇಕಾನಂದರು ಭಾರತೀಯರನ್ನು ನಿಜವಾಗಿಯೂ ಎಚ್ಚರಿಸಿದ ಪುರುಷಸಿಂಹರೇ ಸರಿ !

"ಸಹೋದರರೇ, ಎಲ್ಲರೂ ಕಷ್ಟಪಟ್ಟು ದುಡಿಯೋಣ. ನಿದ್ರೆಗೆ ಸಮಯವಲ್ಲ ಇದು. ನಮ್ಮ ಇಂದಿನ ಕಾರ್ಯದ ಮೇಲೆ ಭವಿಷ್ಯ ಭಾರತ ನಿಂತಿದೆ. ನಮಗಾಗಿ ಆಕೆ ಕಾಯುತ್ತಿರುವಳು. ಆಕೆ ಕೇವಲ ನಿದ್ರಿಸುತ್ತಿರುವಳು, ಅಷ್ಟೇ. ಜಾಗೃತರಾಗಿ, ಏಳಿ, ಎದ್ದು ನೋಡಿ. ಹಿಂದಿಗಿಂತ ಹೆಚ್ಚು ವೈಭವಪೂರ್ಣಳಾಗಿ, ಬಲಿಷ್ಠಳಾಗಿ ನಮ್ಮ ಭಾರತಮಾತೆಯು ಶೋಭಾಯಮಾನವಾಗಿರುವ ಸನಾತನ ಸಿಂಹಾ ಸನದ ಮೇಲೆ ಮಂಡಿಸಿರುವುದನ್ನು ನೋಡಿ" ಎಂದು ಭವಿಷ್ಯದ ಉಜ್ವಲ ಭಾರತದ ಚಿತ್ರಣವನ್ನು ಸ್ವಾಮೀಜಿ ಬಹು ಹಿಂದೆಯೇ ಗುರುತು ಮಾಡಿತೋರಿಸಿದ್ದಾರೆ.

ಅಷ್ಟಾಗಿಯೂ ಸ್ವಾಮೀಜಿ ಹೇಳುವುದೇನೆಂದರೆ, "ನೋಡಿ, ಭರತಖಂಡದಲ್ಲೆಲ್ಲ ಇಷ್ಟು ವರ್ಷಗಳು ನಾನು ಪ್ರಯಾಣ ಮಾಡಿ ದಾಗ ಅನೇಕ ಮಹಾತ್ಮರನ್ನು ಸಂದರ್ಶಿಸಿದೆ. ಅವರ ಹೃದಯದಲ್ಲಿ ಪ್ರೇಮ ತುಂಬಿತುಳುಕುತ್ತಿತ್ತು. ಅವರ ಪಾದದಡಿ ಕುಳಿತಾಗ ಒಂದು ಮಹಾಶಕ್ತಿಯ ಪ್ರವಾಹ ನನ್ನ ಹೃದಯದಲ್ಲಿ ಸಂಚರಿಸಿದಂತೆ ಭಾಸವಾಗುತ್ತಿತ್ತು. ಅವರ ಸಂಪರ್ಕದಿಂದ ಉದ್ಭವಿಸಿದ ಆ ಪ್ರವಾಹದ ಶಕ್ತಿಯಿಂದ ಮಾತ್ರ ನಿಮಗೆ ನಾಲ್ಕು ಮಾತುಗಳನ್ನು ಹೇಳಿದೆ. ನಾನೇನೋ ಒಬ್ಬ ಮಹಾತ್ಮನೆಂದು ತಿಳಿಯಬೇಡಿ!" ಎಂದು. ಅದೆಂಥ ವಿನಯ!

ಒಮ್ಮೆ ಪ್ರಿಯನಾಥ ಸಿನ್ಹ ಎಂಬುವವರು, "ಸ್ವಾಮೀಜಿ, ನಿಮ್ಮಂತೆ ಬೇರೆ ಯಾರು ಆಗಬಲ್ಲರು?"ಎಂದು ಪ್ರಶ್ನಿಸುತ್ತಾರೆ. ಸ್ವಾಮಿ ವಿವೇಕಾನಂದರು, "ನಾನು ಸತ್ತ ಮೇಲೆ ವಿವೇಕಾನಂದರು ಇರುವುದಿಲ್ಲವೆಂದು ಯೋಚಿಸುವೆಯೇನು? ಈಗ ಸ್ವಲ್ಪ ಹೊತ್ತಿಗೆ ಮುಂಚೆ ನನ್ನ ಮುಂದೆ ಸಂಗೀತವನ್ನು ಹಾಡಿದರಲ್ಲ, ಆ ಯುವಕರ ತಂಡದಲ್ಲಿ, ಯಾರನ್ನು ನೀವು ಕುಡುಕರು ದುರ್ವ್ಯಸನಿಗಳು, ಕೆಲಸಕ್ಕೆ ಬಾರದವರು ಎಂದು ತಿರಸ್ಕರಿಸುತ್ತೀರೋ ಅವರಲ್ಲಿ ದೈವೇಚ್ಛೆಯಿದ್ದರೆ, ಒಬ್ಬೊಬ್ಬನೂ ವಿವೇಕಾನಂದನಾಗಬಹುದು. ಜಗತ್ತಿಗೆ ಅವಶ್ಯಕತೆಯಿದ್ದರೆ, ವಿವೇಕಾನಂದರಂಥವರಿಗೆ ಕೊರತೆ ಯಿರುವುದಿಲ್ಲ. ಸಾವಿರಾರು ಲಕ್ಷಾಂತರ ವಿವೇಕಾನಂದರು ಕಾಣಿಸಿ

ಕೊಳ್ಳುವರು. ಎಲ್ಲಿಂದ, ಯಾರಿಗೆ ಗೊತ್ತು! ನನ್ನಿಂದ ಮಾಡಲ್ಪಟ್ಟ ಕೆಲಸ ಖಂಡಿತವಾಗಿಯೂ ವಿವೇಕಾನಂದನ ಕೆಲಸವಲ್ಲ. ಅದು ಭಗವಂತನ ಕೆಲಸ – ಅವನ ಸ್ವಂತ ಕೆಲಸ!" ಎಂದು ಉತ್ತರಿಸು ತ್ತಾರೆ. ಸ್ವಾತಂತ್ರ್ಯ ಹೋರಾಟವನ್ನು, ರಾಷ್ಟ್ರದ ಪುನರ್ನಿರ್ಮಾಣವನ್ನು ಅದು ಭಗವಂತನ ಕೆಲಸವಾಗಿದೆ ಎಂದು ಸಾರಿ ಹೇಳಿದ ಮಹಾನ್ ಸಂತ ಸ್ವಾಮಿ ವಿವೇಕಾನಂದ!

ಸ್ವಾಮಿ ವಿವೇಕಾನಂದರು ಭಾರತದ ಸ್ವಾತಂತ್ರ್ಯ ಹೋರಾಟವನ್ನು ರಾಜಕೀಯ ಹೋರಾಟವನ್ನಾಗಿಸಲಿಲ್ಲ, ರಾಷ್ಟ್ರೀಯ ಆತ್ಮೋನ್ನತಿಯ ಹೋರಾಟವನ್ನಾಗಿಸಿದರು. ಬ್ರಿಟಿಷರ ವಿರುದ್ಧದ ದ್ವೇಷದ ಚಳವಳಿ ಯನ್ನಾಗಿಸಲಿಲ್ಲ, ಭಾರತೀಯರ ಸತ್ಯ, ತ್ಯಾಗ, ಧರ್ಮ, ಪೌರುಷಗಳ ಧಾರಣೆಯ ಚಳವಳಿಯನ್ನಾಗಿಸಿದರು. ಇದು ಬರಿಯ ಭೌತಿಕ ಭೂಮಿಯ ಗಳಿಕೆಗಾಗಿ ನಡೆಯಬೇಕಾದ ಹೋರಾಟವಲ್ಲ, ನಮ್ಮ ಸಂಸ್ಕೃತಿಯ ಘನತೆಯ ಪುನರುತ್ಥಾನಕ್ಕೆ ನಡೆಯಬೇಕಾದ ಹೋರಾಟ ಎಂದು ಮನಗಾಣಿಸಿದವರು ವಿವೇಕಾನಂದರು. ಇದು ಮದದ ಅಹಂಕಾರದ ಜಡತ್ವದ ತಾಮಸ ಮಾರ್ಗವಲ್ಲ, ರಜೋಗುಣ ವೃದ್ಧಿಯಾಗಿ ಭೋಗವನ್ನು ಜೀರ್ಣಿಸಿಕೊಳ್ಳುವ ಶಕ್ತಿಯಾಗುತ್ತಲೇ ಸಾತ್ವಿಕವಾಗುವ ಜಗನ್ಮಾತೆಯ ಮಾರ್ಗ ಎಂಬಂತೆ ಮಾಡಿದವರು ವಿವೇಕಾನಂದರು. 'ಸ್ವಾತಂತ್ರ್ಯ' ಎಂದರೆ ನಿಜವಾದ ಅರ್ಥದಲ್ಲಿ, ಸಾವಿಲ್ಲದ, ನೋವಿಲ್ಲದ ದಡ ಎಂಬುದನ್ನು ತಮ್ಮ ಬೋಧನೆ, ಪ್ರೇರಣೆ, ಕ್ರಿಯಾಶೀಲತೆಯಿಂದ ಸ್ವಾಮೀಜಿ ತೋರಿಸಿ ಕೊಟ್ಟರು. ಆ ಮೂಲಕ ಸ್ವಾಮೀಜಿ ಭಾರತವನ್ನು ಪ್ರಪಂಚದಲ್ಲಿ ಎದ್ದು ನಿಲ್ಲುವಂತೆ ಮಾಡಿದರು; ಪ್ರಪಂಚದ ಜನ ಭಾರತವನ್ನು ಬೆಂಬಲಿಸುವಂತಹ ಪ್ರಭಾವ ಬೀರಿದರು. ಇದು ಸ್ವಾಮಿ ವಿವೇಕಾ ನಂದರ ಅಮೂಲ್ಯ ಕೊಡುಗೆ.

ಹಾಗಾಗಿಯೇ ಲೋಕಮಾನ್ಯ ಬಾಲಗಂಗಾಧರ ತಿಲಕ್ ಅವರು "Swami Vivekananda is the real father of Indian nationalism. Every Indian is proud of this Father." (ಸ್ವಾಮಿ ವಿವೇಕಾನಂದರು ಭಾರತದ ರಾಷ್ಟ್ರೀಯತೆಯ ಪಿತೃಸಮಾನರು. ಅವರನ್ನು ನಮ್ಮ ತೀರ್ಥರೂಪರೆಂದು ಪ್ರತಿಯೊಬ್ಬ ಭಾರತೀಯನೂ ಅಭಿಮಾನಪಡುತ್ತಾನೆ.) ಎಂದಿದ್ದಾರೆ. ಪ್ರೌಢಶಾಲಾ ದಿನಗಳಲ್ಲೇ ಸ್ವಾಮಿ ವಿವೇಕಾನಂದರ 'ಕೊಲಂಬೋದಿಂದ ಆಲ್ಮೋರಾಕೆ' ಕೃತಿಯಿಂದ ಪ್ರೇರಿತರಾದ ಸುಭಾಷ್‌ಚಂದ್ರ ಬೋಸರು ವಿವೇಕಾನಂದರನ್ನು ಕುರಿತು, "reckless in his sacrifice, unceasing in his activity, boundless in his love, profound and versatile in his wisdom, merciless in his attacks, but yet simple as a child" (ತ್ಯಾಗದಲ್ಲಿ ಅಸೀಮರು, ಪ್ರೇಮದಲ್ಲಿ ಸೀಮಾತೀತರು, ಕಾರ್ಯದಲ್ಲಿ ಎಡೆಬಿಡದೆ ಇರುವವರು, ಅರಿವಿನಲ್ಲಿ ಗಾಢ ಹಾಗೂ ವೈಶಾಲ್ಯ ಉಳ್ಳವರು, ಆಘಾತ ಮಾಡುವುದರಲ್ಲಿ ನಿಷ್ಕರುಣಿಗಳು, ಆದರೂ ಮಗುವಿನಂತೆ ಸರಳರು) ಎಂದು ಚಿತ್ರಿಸಿದ್ದಾರೆ.

ರೋಮಾರೋಲಾ ಅವರು ತಮ್ಮ ವಿವೇಕಾನಂದರ ಜೀವನ ಚರಿತ್ರೆಯಲ್ಲಿ, "ಭಾರತದ ರಾಷ್ಟ್ರೀಯತೆಯ ಅಭಿಯಾನವು, ವಿವೇಕಾನಂದರು ಬರುವವರೆಗೂ ಬೂದಿಮುಚ್ಚಿದ ಕೆಂಡದಂತಿತ್ತು. ವಿವೇಕಾನಂದರು ಅದನ್ನು ಜ್ವಾಲೆಯನ್ನಾಗಿ ಮಾಡಿದರು" ಎಂದು ಬರೆದಿದ್ದಾರೆ. ಸೋದರಿ ನಿವೇದಿತಾ, "ಅವರ (ವಿವೇಕಾನಂದರ) ಹೃದಯದ ಬಡಿತ ಭಾರತವೇ ಆಗಿತ್ತು. ಅವರ ನಾಡಿಯ ಮಿಡಿತ ಭಾರತವೇ ಆಗಿತ್ತು. ಅವರು ಕಾಣುವ ಹಗಲುಕನಸು ಭಾರತವೇ ಆಗಿತ್ತು. ರಾತ್ರಿಯ ಕನಸು ಭಾರತವೇ ಆಗಿತ್ತು. ಇಷ್ಟೇ ಅಲ್ಲ, ಅವರೇ ಭಾರತವಾಗಿದ್ದರು; ಜೀವಂತ ಜ್ವಲಂತ ಭಾರತವಾಗಿದ್ದರು" ಎಂದಿದ್ದಾರೆ.

ಸ್ವಾಮಿ ವಿವೇಕಾನಂದರ ಜೀವನ ಹಾಗೂ ದರ್ಶನಗಳಿಂದ ಪ್ರೇರಿತರಾಗಿ, ಪ್ರಚಂಡ ದೇಶಭಕ್ತ ಸಂನ್ಯಾಸಿಯಾಗಿ ಗಂಗಾನದಿಯ ಉತ್ಸಾಹದೊಂದಿಗೆ ಒಂದಾಗಿಹೋದ ಸ್ವಾಮಿ ರಾಮತೀರ್ಥರು ಹೀಗೆ ಹೇಳುತ್ತಾರೆ:

"ಭಾರತದ ಭೂಮಿಯೇ ನನ್ನ ದೇಹ, ಕನ್ಯಾಕುಮಾರಿಯೇ ನನ್ನ ಪಾದಗಳು, ಹಿಮಾಲಯ ಪರ್ವತವೇ ನನ್ನ ಶಿರ, ವಿಂಧ್ಯ ಪರ್ವತವೇ ನನ್ನ ಕಟಿ, ಪೂರ್ವಘಟ್ಟ ಮತ್ತು ಪಶ್ಚಿಮಘಟ್ಟಗಳೇ ನನ್ನ ಕಾಲುಗಳು, ನಾನೇ ಭಾರತ! ನಾನು ನಡೆದರೆ ಭಾರತವೇ ನಡೆದಂತೆ ಅನಿಸುತ್ತದೆ, ನಾನು ಉಸಿರಾಡಿದರೆ ಭಾರತವೇ ಉಸಿರಾಡುತ್ತಿದೆಯೆಂದು ಅನಿಸುತ್ತದೆ. ನಾನು ಮಾತನಾಡಿದರೆ ಭಾರತವೇ ಮಾತನಾಡಿದಂತೆ ಅನಿಸುತ್ತದೆ. ನಾನೇ ಭಾರತ."

ಈ ಮಾತುಗಳು ಸ್ವಾಮಿ ವಿವೇಕಾನಂದರು ಭಾರತದ ಸ್ವಾತಂತ್ರ್ಯದ ಹೋರಾಟ, ಸ್ವಾತಂತ್ರ್ಯದ ಗಳಿಕೆ, ಸ್ವಾತಂತ್ರ್ಯದ ಸಂರಕ್ಷಣೆಗಳ ಮೇಲೆ ಎಂಥ ಪ್ರಭಾವ ಪರಿಣಾಮ ಬೀರಿದ್ದಾರೆಂಬುದಕ್ಕೆ ಮಹತ್ವದ ಸಾಕ್ಷಿಯಾಗಿದೆ.

"ರಾಷ್ಟ್ರದ ನಿರ್ಮಾಣ ಕಠೋರನಿಷ್ಠೆಯ ಪ್ರಾಮಾಣಿಕ ಸಂತ ರಿಂದ ಮಾತ್ರ ಸಾಧ್ಯ" ಎಂಬ ಡಾ. ಎಸ್. ರಾಧಾಕೃಷ್ಣನ್‌ರ ಮಾತಿಗೆ ಸ್ವಾಮಿ ವಿವೇಕಾನಂದರ ಜೀವನವು ಒಂದು ಉತ್ತಮ ಉದಾಹರಣೆ ಯಾಗಿದೆ, ಅಲ್ಲವೆ ?

**ನನಗೀಗ ಅರುವತ್ತು ವರ್ಷ. ನಾನು ಚಿಕ್ಕವಯಸ್ಸಿನಲ್ಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದೆ. ಆ ದಿನಗಳಲ್ಲಿ ಕರ್ನಾಟಕದ ಹಿರಿಯ ಪ್ರಚಾರಕರಾಗಿದ್ದ ಮಾನ್ಯ ಶ್ರೀ ಕೃ. ಸೂರ್ಯನಾರಾಯಣರಾಯರ ಉಪನ್ಯಾಸದ ಮೂಲಕ ನಾನು ಮೊದಲಿಗೆ ಸ್ವಾಮಿ ವಿವೇಕಾನಂದರ ಬಗ್ಗೆ ಕೇಳಿ ತಿಳಿದೆ. ಅವರ ಒಂದು ಗಂಟೆಯ ಉಪನ್ಯಾಸದಲ್ಲಿ ಎರಡು ವಿಷಯಗಳು ನನ್ನ ಮೇಲೆ ಬಹಳ ಪ್ರಭಾವ ಬೀರಿದವು. ಮೊದಲನೆಯದು, ವಿವೇಕಾನಂದರು ತಮ್ಮ ಗುರುಗಳು ಹೇಳಿದಂತೆ ಏಕಾಂಗಿಯಾಗಿ ದೇವಿಯ ಮುಂದೆ ನಿಂತು ತಮ್ಮ ಸಂಕಷ್ಟಕ್ಕೆ ಪರಿಹಾರ ಕೇಳಬೇಕೆಂದುಕೊಂಡಿದ್ದರು. ಆದರೆ ಎಷ್ಟೇ ಪ್ರಯತ್ನಪಟ್ಟರೂ ಮಾತು ಹೊರಡಲಿಲ್ಲ. ಜಗತ್ತಿಗೆ ತಾಯಿಯಾದ ಆಕೆಗೆ ನನ್ನ ಕಷ್ಟದ ಪರಿವೆಯಿಲ್ಲವೇ ಎಂದು ಯೋಚಿಸಿ ಹಾಗೆಯೇ ಏನೂ ಕೇಳದೇ ಹಿಂದಿರುಗಿದರು. ಎರಡನೆಯದು ನಮ್ಮ ಧರ್ಮ ಹಾಗೂ ದೇಶಕ್ಕೆ ಯಾರಿಂದಲಾದರೂ ಅವಮಾನವಾದರೆ ಅದನ್ನು ಅವರು ಸಹಿಸುತ್ತಿರಲಿಲ್ಲ. ಅದಕ್ಕಾಗಿ ಎಷ್ಟೋಬಾರಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಅವರಿಂದ ಪ್ರೇರಿತನಾದ ನಾನು ದೇವರನ್ನು ಏನೂ ಬೇಡಲಾಗುತ್ತಿಲ್ಲ. ನನಗೆ ಸರಿ ಅನಿಸದ ಕಾರ್ಯ ಮಾಡುತ್ತಿರುವವರನ್ನು, ಅವರು ಯಾವ ಅಧಿಕಾರ ಅಂತಸ್ತಿನಲ್ಲಿದ್ದರೂ ನಾನವರನ್ನು ಎದುರಿಸಿದ್ದೇನೆ. ಲಾಭ ನಷ್ಟದ ವಿಷಯ ಬೇರೆ. ಇದುವರೆಗೂ ನನ್ನ ಮನಸ್ಸಿನಲ್ಲಿ 'National Hero' ಎಂದರೆ ಸ್ವಾಮಿ ವಿವೇಕಾನಂದರೇ. – ಆರ್.ನಾಗೇಶ್ ರಾವ್**

# ಸಂತ ಶ್ರೇಷ್ಠ ಕವಿ: ಸ್ವಾಮಿ ವಿವೇಕಾನಂದ

ಜಯಪ್ಪ ಹೊನ್ನಾಳಿ

**ಕವಿ ಎಂದರೆ ಕ್ರಾಂತದರ್ಶಿ ಎಂದರ್ಥ. ಆತನದು ಅತೀತದಾಚೆಯ ದೃಷ್ಟಿ; ಅಖಂಡತೆಯ ಪರಿಭಾವನೆ. ಹಾಗೆಂದೇ ನಮ್ಮ ಋಷಿಮುನಿಗಳು ಶ್ರೇಷ್ಠ ಋಷಿಗಳಾಗಿದ್ದರು. ಅವರ ರಚನೆಗಳೆಲ್ಲವೂ ಅಸೀಮ ಕಾವ್ಯ ಸೃಷ್ಟಿಯೇ ಆಗಿವೆ. ಅವರ ಸಾಲಿನಲ್ಲಿ ಬರುವಂಥವರು ಸ್ವಾಮಿ ವಿವೇಕಾನಂದರು. ಅವರು ನುಡಿದಿದ್ದೆಲ್ಲ ಕಾವ್ಯ, ಬರೆದಿದ್ದೆಲ್ಲ ಕಾವ್ಯ. ಈ ಅಂಶವನ್ನು ಅತ್ಯಂತ ರೋಚಕ ಅಭಿವ್ಯಕ್ತಿಯೊಂದಿಗೆ ನಮ್ಮ ಮುಂದೆ ಪ್ರಸ್ತುತಪಡಿಸಿರುವ ಮಾನ್ಯ ಲೇಖಕರು ಸ್ವತಃ ಉತ್ತಮ ಮಟ್ಟದ ಕವಿಗಳು. ಮೈಸೂರಿನ ಶಾಲೆಯೊಂದರಲ್ಲಿ ದೈಹಿಕ ಶಿಕ್ಷಕರಾದ ಇವರು ಉತ್ತಮ ವಾಗ್ಮಿಗಳು, ಬರಹಗಾರರು; ೨೦ ಕ್ಕೂ ಹೆಚ್ಚು ಕಥೆ ಹಾಗೂ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.**

"ಸಮಸ್ತ ಜನರ ಆತ್ಮಗಳ ಮೊತ್ತವಾದ, ಇರುವ ನನ್ನ ಒಬ್ಬ ದೇವರನ್ನು, ನಾನು ನಂಬುವ ಏಕಮಾತ್ರ ದೇವರನ್ನು – ಎಲ್ಲಕ್ಕಿಂತ ಹೆಚ್ಚಾಗಿ ನನ್ನ ದುರುಳ ದೇವರನ್ನು, ದುಃಖಿ ದೇವರನ್ನು, ಎಲ್ಲ ಜನಾಂಗಗಳ ಪ್ರಭೇದಗಳ ದರಿದ್ರದೇವರನ್ನು ಪೂಜಿಸುವುದಕ್ಕಾಗಿ ನಾನು ಪುನಃ ಪುನಃ ಜನ್ಮತಳೆಯುವಂತಾಗಲಿ, ಸಾವಿರ ಯಾತನೆಗಳನ್ನು ಅನುಭವಿಸುವಂತಾಗಲಿ" ಎಂದು ಬುದ್ಧಿಪೂರ್ವಕವಾಗಿ ಮತ್ತು ಭಾವಪೂರ್ವಕವಾಗಿ ಹೇಳಿರುವ, ಈ ಕಾರಣಕ್ಕಾಗಿ ತನಗೆ ಮೋಕ್ಷವೇ ಬೇಡವೆಂದಿರುವ, ಸದಾ ಸೃಜನಶೀಲರಾಗಿದ್ದ ದ್ರಷ್ಟಾರ, ಸ್ವಾಮಿ ವಿವೇಕಾನಂದರ ಅಂತರಾಳದ ಅನಿಸಿಕೆಯನ್ನು ಪ್ರತಿನಿಧಿಸಿರುವ, ನಾವಿಲ್ಲಿ ನೆನಪಿಸಿಕೊಳ್ಳಬಹುದಾದ ಇನ್ನೊಂದು ಮಾತೆಂದರೆ, "ಮರೆಯದಿರಿ ಮಾನವ ಪ್ರಕೃತಿಯ ವೈಭವವನ್ನು! ನಾವೇ ಉತ್ತಮೋತ್ತಮ ದೇವರು!..... ಕ್ರಿಸ್ತ ಬುದ್ಧರುಗಳೆಲ್ಲ ನಾನಾಗಿರುವ ಆ ಅಪರಿಮಿತ ಸಾಗರದ ಮೇಲಣ ಅಲೆಗಳು" ಎಂಬುದು.



ಪ್ರಾಚ್ಯ ಪಾಶ್ಚಾತ್ಯಗಳ ನಡುವಣ ದೈವಿಕ ಸೇತುವೆಯಾದ ಸ್ವಾಮೀಜಿಯವರು ಮೇಲಿನ ಮಾತುಗಳನ್ನು ಆಡಿದ್ದು ಅಮೆರಿಕದಲ್ಲಿ, ೧೮೯೩ ರಲ್ಲಿ. ಉಪನಿಷತ್ತುಗಳ ಯುಗದಿಂದಲೂ ಭಾರತಾಂಬೆಯ ನಾಭಿಚಿಂತನೆಯಾದ 'ಮಾನವನಿಗಿಂತ ಮಿಗಿಲಾದ ದೇವನಿಲ್ಲ' ಎಂಬ ಭಾವನಾಸತ್ಯವೇ ಈ ಕವಿಗೆ, ಈ ರಸಋಷಿಯ ಕಾವ್ಯಕ್ಕೆ ಕಲ್ಪನಾ ಸಾಮಗ್ರಿಯಾಗಿ, ಮೂಲದ್ರವ್ಯವಾಗಿ ಒದಗಿ ಬಂದಿದೆ. ಹೀಗೆ ಅನೇಕಾನೇಕ ಭಾವನಾ ಸತ್ಯಗಳಿಗೆ ನವ ದಿಗ್ದರ್ಶನವನ್ನಿತ್ತು, ಹೊಸತಾದ ಆಧ್ಯಾತ್ಮಿಕತೆಯ ಮೌಲಿಕತೆಯನ್ನು ತಂದುಕೊಟ್ಟು, ಕಾವ್ಯವನ್ನು ಪೂರ್ಣ ಆನುಭಾವಿಕ ನೆಲೆಗೇರಿಸಿ ಶ್ರೀಮಂತಗೊಳಿಸಿದವರು, ಆಧುನಿಕ ಶ್ರೇಷ್ಠ ಚಿಂತಕರ ಸಾಲಿನಲ್ಲಿ ಉಜ್ವಲ ತಾರೆಯಾದ ಸ್ವಾಮಿ ವಿವೇಕಾನಂದರು.

ಹಾಗೆ ನೋಡಿದರೆ ವಾಸ್ತವಿಕವಾಗಿ ವಿಜ್ಞಾನ ವಿಕಾಸ ಹಾಗೂ ಆಧ್ಯಾತ್ಮಿಕ ಆವಶ್ಯಕತೆಗಳನ್ನು ಏಕವಾಗಿಸಿ, ಅಂದರೆ ತಂತ್ರಜ್ಞಾನದ ಜೊತೆ ಸೌಂದರ್ಯಾನುಭೂತಿಯನ್ನು ಬೆರೆಸಿ, ಆ ಮೂಲಕ ಮಧ್ಯಯುಗೀನ ಸಮಾಜ ವ್ಯವಸ್ಥೆಗೆ ಹೊಸಯುಗದ ಮೌಲಿಕತೆ ದಕ್ಕಿಸಿ, ಹಳೆಯ ಆಧ್ಯಾತ್ಮಿಕತೆಯ ಆತ್ಮಕ್ಕೆ ನವ ಮಾನವೀಯ ಮೈ–ಮುಖಗಳನ್ನು ತಂದುಕೊಟ್ಟ ಸ್ವಾಮಿ ವಿವೇಕಾನಂದರ ಎಲ್ಲ ಮಾತುಗಳೂ, ಚಿಂತನಗಳೂ, ಭಾಷಣಗಳೂ, ಅಷ್ಟೆ ಏಕೆ ಇವರು ಬರೆದ ಪತ್ರಗಳೂ ಕೂಡ ಕಾವ್ಯವೇ ಆಗಿವೆ. ಏಕೆಂದರೆ ಅವೆಲ್ಲವುಗಳಲ್ಲಿಯೂ ಕಾವ್ಯದ ಪ್ರಮುಖ ಲಕ್ಷಣವಾದ **ಅಪೂರ್ವತೆ ಅನನ್ಯತೆ**ಗಳಿವೆ. ಅಗಾಧವಾದ ಪ್ರತಿಭೆ ಆ ಎಲ್ಲವುಗಳಲ್ಲೂ ವ್ಯಾಪಿಸಿದೆ. ಹಿಂದಿನ ಅಂದರೆ, ಒಂದರ್ಥದಲ್ಲಿ ಜಡ್ಡುಗಟ್ಟಿದ್ದ, ನಮಗೆ ಸುಪರಿಚಿತವಾಗಿದ್ದ ಅನೇಕ ವಿಚಾರಗಳಿಗೆ ಒಂದು ಬಗೆಯ ಆಕರ್ಷಣೆಯನ್ನೂ, ಅರ್ಥವಂತಿಕೆಯನ್ನೂ, ಒಂದು ರೀತಿಯ ನವ ನವತ್ವವನ್ನೂ, ಜೊತೆಗೆ ಅವುಗಳಿಗೆ ಹೊಸ ಹೊಗರನ್ನೂ ತಮ್ಮ ವಿಶಿಷ್ಟ ದರ್ಶನದಿಂದ ಅವರು ತಂದುಕೊಟ್ಟಿದ್ದಾರೆ. ಹಾಗಾಗಿಯೇ ನಾವು ಉಳಿದವರ ಗದ್ಯವನ್ನು ಓದಿದಾಗ ಲಭಿಸದ ಹೊಸತನ ಮತ್ತು ಅಪೂರ್ವತೆ ಅನನ್ಯತೆಗಳು ಅಲಂಕಾರಮಯವಾಗಿ, ಸ್ಫೂರ್ತಿದಾಯಕವಾಗಿ, ವಿಸ್ಮಯಗೊಳ್ಳುವಂತೆ ನಮಗಿಲ್ಲಿ ದಕ್ಕುತ್ತವೆ. ಬೇರೆಯವರ ಗದ್ಯ ಯಾವುದೇ ಒಂದು ವಿಚಾರವನ್ನೋ, ಸಿದ್ಧಾಂತವನ್ನೋ ತಾರ್ಕಿಕವಾಗಿ ಪ್ರತಿಪಾದಿಸುವ ಕಾರಣ, ಅದನ್ನು ಒಮ್ಮೆ